# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 184 |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16-07-2024 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಸ್ಮಾರ್ಟ ಸಿಟಿ ಅಮಿಟೆಡ್ ಕಂಪನಿ MSCL ಕೈಗೊಂಡ ನೇತ್ರಾವತಿ ವಾಟರ್ ಫ್ರಂಟ್ (ಜಲಾಬಿಮುಖ) ಯೋಜನೆಯು ಪ್ರಾರಂಭವಾದ ವರ್ಷ ಯಾವುದು ಮತ್ತು ಯೋಜನೆ ಪೂರ್ಣಗೊಳಿಸಲು ತೆಗೆದುಕೊಂಡ ಕಾಲಮಿತಿ ಎಷ್ಟು; | ಸ್ಮಾರ್ಟ್ ಸಿಟಿ ಅಭಿಯಾನದಡಿ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನೇತ್ರಾವತಿ Water Front ಅಭಿವೃದ್ಧಿಗೆ ಮಹಾ ಯೋಜನೆ (Master Plan) ತಯಾರಿಸಲಾಗಿದ್ದು, ಇದರಡಿ 6 ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಯೋಜನೆಯ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| ಆ) | ಈ ಯೋಜನೆಯಲ್ಲಿ ಹಲವಾರು ರಸ್ತೆಗಳು, ಫುಟ್‌ಪಾತ್ ಗಳು, ಉದ್ಯಾನವನಗಳು, ಕೆರೆಗಳು, ಸ್ಮಾರ್ಟ್ ಬಸ್ ನಿಲ್ದಾಣಗಳು, ಇ-ಶೌಚಾಲಯಗಳು ಇತ್ಯಾದಿ ಅವೈಜ್ಞಾನಿಕ ಮತ್ತು ಕಳಪೆ ಕಾಮಗಾರಿಗಳಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ. ಸರ್ಕಾರ ಕೈಗೊಂಡ ಕ್ರಮಗಳೇನು: ಸರ್ಕಾರ ಗಮನಕ್ಕೆ ಬಾರದಿದ್ದಲ್ಲಿ ಮುಂದೆ ತೆಗೆದುಕೊಳ್ಳುವ ಕ್ರಮಗಳೇನು: | ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ (MSCL) ಈಗಾಗಲೇ ಹಲವಾರು ರಸ್ತೆಗಳು, ಫುಟ್ ಪಾತ್‌ಗಳು, ಉದ್ಯಾನವನಗಳು, ಕೆರೆಗಳು, ಸ್ಮಾರ್ಟ್ ಬಸ್ ನಿಲ್ದಾಣಗಳು, ಇ-ಶೌಚಾಲಯಗಳು ಇತ್ಯಾದಿ ಅವೈಜ್ಞಾನಿಕ ಮತ್ತು ಕಳಪೆ ಕಾಮಗಾರಿಯಾಗಿರುತ್ತದೆ ಎಂಬ ಅಂಶವು ಸತ್ಯಕ್ಕೆ ದೂರವಾಗಿರುತ್ತದೆ. ಈ ನಿಟ್ಟಿನಲ್ಲಿ ಮಂಗಳೂರು ನಗರದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಅಳವಡಿಸಿಕೊಂಡಿರುವ ಕಾರ್ಯವಿಧಾನ ಮತ್ತು ಸಾರ್ವಜನಿಕ ಪ್ರತಿನಿಧಿಗಳು ಹಾಗೂ ಸಂಬಂಧಿತ ಇಲಾಖೆಗಳೊಂದಿಗೆ ಕೈಗೊಂಡಿರುವ ಸಮನ್ವಯ ಕಾರ್ಯಗಳ ಬಗ್ಗೆ ಈ ಕೆಳಕಂಡಂತೆ ವಿವರಿಸಿದೆ.<br><br>ಕೇಂದ್ರ ಹಾಗೂ ರಾಜ್ಯ ಸರ್ಕಾರ ಪ್ರಾಯೋಜಿತ ಸ್ಮಾರ್ಟ್ ಸಿಟಿ ಅಭಿಯಾನವು ಜೂನ್-2015 ರಲ್ಲಿ ಪ್ರಾರಂಭವಾಗಿದ್ದು, ಮಂಗಳೂರು ನಗರವು ಅಭಿಯಾನದ 2ನೇ ಸುತ್ತಿನಲ್ಲಿ ದಿನಾಂಕ: 03.10.2016 ರಂದು ಅಯ್ಕೆಯಾಗಿರುತ್ತದೆ. ಯೋಜನೆಗಳ ಅನುಷ್ಠಾನಕ್ಕಾಗಿ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಎಂಬ ವಿಶೇಷ ಉದ್ದೇಶಿತ ವಾಹನವನ್ನು ರಾಜ್ಯ ಸರ್ಕಾರವು ದಿನಾಂಕ: 06.04.2017 ರಂದು ಸ್ಥಾಪಿಸಿರುತ್ತದೆ.<br><br>ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿ ಅನುಸಾರ ನಗರಗಳ ಆಯ್ಕೆಯ ಹಂತದಲ್ಲಿ Smart City Proposal (SCP) ಗಳನ್ನು ಸಿದ್ಧಪಡಿಸಬೇಕಾಗಿದ್ದು, SCP ಯು ಆಯಾ ನಗರದ ಮೂಲಸೌಕರ್ಯ ಸೌಲಭ್ಯಗಳ ಉನ್ನತೀಕರಣ, ನಾಗರಿಕರ ಜೀವನಮಟ್ಟ ಸುಧಾರಣೆ, ಸ್ವಚ್ಛ ಮತ್ತು ಸುಸ್ಥಿರ ಪರಿಸರಕ್ಕೆ ಉತ್ತೇಜನ ನೀಡುವ ಹಲವಾರು ಅಂಶಗಳನ್ನು ಒಳಗೊಂಡಿರುತ್ತದೆ. |
| ಇ) | ಈ ಸದರಿ ಯೋಜನೆಯಲ್ಲಿ ಖರ್ಚು ಮಾಡಿದ ಅನುದಾನವೆಷ್ಟು: ಹಾಗೂ ಸದರಿ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಯ ಗುಣಮಟ್ಟವನ್ನು ಸಮರ್ಪಕವಾಗಿ ಪರಿಶೀಲಿಸಲಾಗಿದೆಯೇ:<br>(ಕಿ.ಮೀ.ವಾರು ಅನುದಾನದ ವಿವರ ನೀಡುವುದು ಮತ್ತು ಗುಣಮಟ್ಟ ಪರಿಶೀಲನೆಯ ಸಂಪೂರ್ಣ ಮಾಹಿತಿ ನೀಡುವುದು) | |
| ಈ) | ಈ ಯೋಜನೆಯ ಜೊತೆಗೆ, ಸದರಿ ಕಂಪನಿಯು ಕೈಗೊಂಡ ಹಲವಾರು | |

| | | |
|---|---|---|
| | ಯೋಜನೆಗಳು ಇಲ್ಲಿಯವರಿಗೆ ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸದರಿ ಕಂಪನಿಗೆ ನೇತ್ರಾವತಿ ವಾಟರ್ ಫ್ರಂಟ್ (ಜಲಾಭಿಮುಖ) ಯೋಜನೆಯನ್ನು ಒದಗಿಸಿರುವುದು ಸರಿಯೇ ಇದಕ್ಕೆ ಹೊಣೆ ಯಾರು: (ಸಂಪೂರ್ಣ ಮಾಹಿತಿ ನೀಡುವುದು) | ಮಂಗಳೂರು ಸ್ಮಾರ್ಟ್ ಸಿಟಿ ಕ್ರಿಯಾ ಯೋಜನೆಗೆ ಮಂಗಳೂರು ಮಹಾನಗರ ಪಾಲಿಕೆಯು ದಿನಾಂಕ:29.06.2016 ರಂದು ಅನುಮೋದನೆ ನೀಡಿದ್ದು, ತದನಂತರ ಕೇಂದ್ರ ಸರ್ಕಾರ ಹಾಗೂ ರಾಜ್ಯ ಉನ್ನತ ಮಟ್ಟದ ಸಂಚಾಲನ ಸಮಿತಿ ಸಭೆಯಿಂದ ಅನುಮೋದನೆಗೊಂಡಿರುತ್ತದೆ.<br><br>ಸ್ಮಾರ್ಟ್‌ಸಿಟಿ ಮಿಷನ್ ಮಾರ್ಗಸೂಚಿಗಳ ಪ್ರಕಾರ ಕಾಮಗಾರಿಗಳ ಅನುಷ್ಠಾನವನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಗರ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಚರ್ಚಿಸಿ, ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಸಮಿತಿಯಲ್ಲಿ ಲೋಕಸಭಾ ಸಂಸದರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಉತ್ತರ ಹಾಗೂ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರು, ಮಹಾಪೌರರು, ಮಹಾನಗರ ಪಾಲಿಕೆ, ಆಯುಕ್ತರು ಮಹಾನಗರ ಪಾಲಿಕೆ, ಆರ್ಥಿಕ ತಜ್ಞರು, ತಾಂತ್ರಿಕ ತಜ್ಞರು, ಹಾಗೂ ಕಾನೂನು ತಜ್ಞರು ಮತ್ತು ಇತರೆ ಉನ್ನತ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಸದರಿ ಸಮಿತಿಯ ಸಭೆಯಲ್ಲಿ ಸಂಬಂಧಿತ ಇಲಾಖೆಯ ಅಧಿಕಾರಿಗಳು ಹಾಗೂ ವಿಷಯ ತಜ್ಞರ ಸಮಕ್ಷಮದಲ್ಲಿ ಸಭೆ ನಡೆಸಿ ಕಾಮಗಾರಿಗಳ ಸ್ವರೂಪವನ್ನು ಅಂತಿಮಗೊಳಿಸಲಾಗಿರುತ್ತದೆ.<br><br>ಇದಲ್ಲದೇ ಕಾಮಗಾರಿಯ ಅನುಷ್ಠಾನದ ಸಮಯದಲ್ಲಿ ಕಾಲಕಾಲಕ್ಕೆ ಅಂತರ್ ಇಲಾಖೆ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಜೊತೆ ಸಮನ್ವಯ ಸಾಧಿಸಿ ಕಾಮಗಾರಿ ನಡೆಸಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುತ್ತದೆ.<br><br>ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಕಾಲಾನುಕಾಲಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಮಹಾಪೌರರ, ಶಾಸಕರ, ಹಾಗೂ ಸಂಸದರ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆಯನ್ನು ಕೈಗೊಳ್ಳಲಾಗುತ್ತಿದೆ. ಕಾಲಕಾಲಕ್ಕೆ ಸಭೆಗಳನ್ನು ನಡೆಸಲಾಗುತ್ತದೆ.<br><br>ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ರೂ.955 ಕೋಟಿ ಮೊತ್ತದ 62 ಕಾಮಗಾರಿಗಳನ್ನು ಕೈಗೊಂಡಿದ್ದು, ಇವುಗಳ ಪೈಕಿ ರೂ.533.78 ಕೋಟಿ ಮೊತ್ತದ 42 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಬಾಕಿ ರೂ.420.91 ಕೋಟಿ ಮೊತ್ತದ 19 ಕಾಮಗಾರಿಗಳು ಪ್ರಗತಿಯಲ್ಲಿದೆ ಮತ್ತು ರೂ. 0.30 ಕೋಟಿ ಮೊತ್ತದ ಒಂದು ಕಾಮಗಾರಿಯು ಟೆಂಡರ್ ಹಂತದಲ್ಲಿದೆ. ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ಗೆ ಈವರೆಗೆ ರೂ.843.00 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಜುಲೈ-2024 ವರೆಗೆ 818.59 ಕೋಟಿ (97%) ಆರ್ಥಿಕ ಪ್ರಗತಿ ಸಾಧಿಸಲಾಗಿದೆ,.<br><br>ಯೋಜನಾ ಅನುಷ್ಠಾನದಲ್ಲಿ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ಗೆ ನೆರವು ನೀಡಲು ಯೋಜನಾ ಸಮಾಲೋಚಕರನ್ನು (PMC) ನೇಮಿಸಲಾಗಿದ್ದು, ಕಾಮಗಾರಿಗಳ ಅನುಷ್ಠಾನದ ಸಮಯದಲ್ಲಿ ಗುಣಮಟ್ಟ ಕಾಪಾಡಲು ಸಲಹೆ ಸೂಚನೆಗಳನ್ನು ನೀಡುತ್ತಿರುತ್ತಾರೆ. ಅಲ್ಲದೇ ನಿರ್ದಿಷ್ಟ ದೂರು ಸ್ವೀಕೃತವಾದ ಸಂಧರ್ಭಗಳಲ್ಲಿ ಕಾಮಗಾರಿವಾರು 3ನೇ ವ್ಯಕ್ತಿ ತಪಾಸಣೆ ಮೂಲಕ ಕಾಮಗಾರಿಗಳ ಗುಣಮಟ್ಟ ಖಚಿತ ಪಡಿಸಿಕೊಳ್ಳಲಾಗುತ್ತಿದೆ. |
| ಉ) | ಇದಕ್ಕೆ ಅನುಗುಣವಾಗಿ ಸಹಕರಿಸಿದೆ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಇಲ್ಲದಿದ್ದಲ್ಲಿ, ಯಾವ ರೀತಿ ಕ್ರಮ ಕೈಗೊಳ್ಳಲಿದೆ: ಯೋಜನೆಯನ್ನು ಅಪೂರ್ಣಗೊಳಿಸಿದ MSCL ವಿರುದ್ಧ ಸರ್ಕಾರ ಕೈಗೊಳ್ಳಲಿರುವ ಕಠಿಣ ಕ್ರಮಗಳೇನು: (ವಿವರವಾರು ಮಾಹಿತಿ ನೀಡುವುದು) | |
| ಊ | ಈ ರೀತಿ ಅಕ್ರಮಗಳು ಕಾರ್ಯವಿಧಾನದ ಲೋಪಗಳಿಂದ ಸ್ಥಳೀಯರ ಜೀವನೋಪಾಯದ ಮೇಲೆ ಪರಿಣಾಮ ಬೀರುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಸರ್ಕಾರದ ಗಮನಕ್ಕೆ ಬಾರದಿದ್ದಲ್ಲಿ ಈ ರೀತಿ ಕೆಲಸಗಳು: ಜರುಗುವುದು ಸಮಂಜಸವೇ: | |
| ಋ | ಅವೈಜ್ಞಾನಿಕ ಕಾಮಗಾರಿಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | |
| ೠ | ಬಂದಿದ್ದಲ್ಲಿ ಅಂತಹವರುಗಳ ವಿರುದ್ಧ ಸರ್ಕಾರ ಕೈಗೊಳ್ಳುವ ಕ್ರಮಗಳೇನು: ಇದಕ್ಕೆ ಯಾರನ್ನೂ ಹೊಣೆ. ಮಾಡಿ, ನಿಜವಾದ ತಪ್ಪಿತಸ್ಥರನ್ನು ಕೈಬಿಡುವ ಸಂಬಂಧ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳಲಿದೆ' (ಸಂಪೂರ್ಣ ವಿವರ ನೀಡುವುದು) | |

ಮಂಗಳೂರು ನಗರವು ಸ್ಮಾರ್ಟ್‌ಸಿಟಿ ಅಭಿಯಾನದಡಿ ಆಯ್ಕೆಯಾಗಲು ಜಲಾಭಿಮುಖ ಪ್ರದೇಶ ಅಭಿವೃದ್ಧಿ ಯೋಜನೆಯು ಮಹತ್ತರ ಪಾತ್ರ ವಹಿಸಿರುತ್ತದೆ.

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಾರ್ಯಾರಂಭಗೊಂಡ ನಂತರ ಈ ಯೋಜನೆಗೆ ವಿಸ್ತೃತ ಯೋಜನಾ ವರದಿ ತಯಾರಿಸಲು ನಗರದ ಸ್ಥಳೀಯರು, ಮೀನುಗಾರರು, ಟೈಲ್ ಫ್ಯಾಕ್ಟರಿ ಮಾಲೀಕರು, ಇತರೆ ವ್ಯಾಪಾರ ವಹಿವಾಟು ನಡೆಸುತ್ತಿರುವವರು, ಜನ ಪ್ರತಿನಿಧಿಗಳು, ಕೆನರಾ ಛೇಂಬರ್ ಆಫ್ ಕಾಮರ್ಸ್, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಮೀನುಗಾರಿಕೆ ಕಾಲೇಜು, ಬಂದರು ಇಲಾಖೆ, ಮೀನುಗಾರಿಕೆ ಇಲಾಖೆ, ಪ್ರವಾಸೋಧ್ಯಮ ಇಲಾಖೆ, ಭೂದಾಖಲೆಗಳ ಇಲಾಖೆ, ಕಂದಾಯ ಇಲಾಖೆ, ಗ್ರಾಮ ಲೆಕ್ಕಿಗರು, ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಶಾಸಕರು, ಲೋಕಸಭಾ ಸದಸ್ಯರು, ನಗರಾಭಿವೃದ್ಧಿ ಇಲಾಖೆ, ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ ಚರ್ಚಿಸಿ ಸಲಹೆ ಹಾಗೂ ಸೂಚನೆಗಳನ್ನು ಗಣನೆಗೆ ತೆಗೆದುಕೊಂಡು ನಂತರ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದೆ

- ಯೋಜನೆಯ ಅನುಮೋದನೆಗಾಗಿ ತೆಗೆದುಕೊಂಡಿರುವ ಕ್ರಮ;
  (ಅ) ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ಮಂಗಳೂರು ಸ್ಮಾರ್ಟ್ ಸಿಟಿ ಮಂಡಳಿ ಅವರ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಇಲಾಖೆಗಳೊಂದಿಗೆ 4 ಸಭೆಗಳು (05.03.2020, 20.03.2020, 30.05.2020, 21.05.2022) ಜರುಗಿರುತ್ತದೆ.

  (ಆ) ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಅವರ ಅಧ್ಯಕ್ಷತೆಯಲ್ಲಿ 6 ಸಭೆಗಳು (05.03.2020, 15.06.2021, 16.06.2021, 29.09.2021, 20.01.2022, 28.04.2021) ಜರುಗಿರುತ್ತದೆ.

  (ಇ) ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ಸ್ಮಾರ್ಟ್ ಸಿಟಿ ಅವರ ಅಧ್ಯಕ್ಷತೆಯಲ್ಲಿ 5 ಸಭೆಗಳು (09.02.2021, 06.03.2021, 25.05.2021, 08.06.2021, 05.02.2022) ಜರುಗಿರುತ್ತದೆ.

  (ಈ) ಆಯುಕ್ತರು ಮಂಗಳೂರು ಮಹಾನಗರ ಪಾಲಿಕೆ ಅವರ ಅಧ್ಯಕ್ಷತೆಯಲ್ಲಿ 2 ಸಭೆಗಳು (20.10.2020, 26.11.2020) ಜರುಗಿರುತ್ತದೆ.

  (ಉ) ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಮಂಗಳೂರು ಸ್ಮಾರ್ಟ್ ಸಿಟಿ ಅವರ ಅಧ್ಯಕ್ಷತೆಯಲ್ಲಿ 2 ಸಭೆಗಳು (14.05.2021, 01.06.2021) ಜರುಗಿರುತ್ತದೆ.

  (ಊ)ಬಂದರು ಅಧಿಕಾರಿ ಹಾಗೂ ಕಾರ್ಯಪಾಲಕ ಅಭಿಯಂತರರು ಮಂಗಳೂರು ಸ್ಮಾರ್ಟ್ ಸಿಟಿ ಅವರೊಂದಿಗೆ 06.03.2021 ಸಭೆ ನಡೆಸಲಾಗಿದೆ.

- ಈ ಮೇಲಿನಂತೆ, ವಿಸ್ತೃತವಾದ ಸಮಾಲೋಚನೆ ಹಾಗೂ ಸಭೆಗಳನ್ನು ಕೈಗೊಂಡು, ಸ್ವೀಕೃತಾದ ಸಲಹೆ ಸೂಚನೆಗಳನ್ನು ಪರಿಗಣಿಸಿ ಜಲಾಭಿಮುಖ ಅಭಿವೃದ್ಧಿಗೆ ಮಹಾಯೋಜನೆ ಮತ್ತು ಉಪ ಯೋಜನೆಗಳನ್ನೊಳಗೊಂಡು ತಯಾರಿಸಿದ ಯೋಜನಾ ವರದಿಗಳನ್ನು ಈ ಕೆಳಕಂಡಂತೆ ಅಂತಿಮಗೊಳಿಸಲಾಗಿರುತ್ತದೆ:

| ಕ್ರ. ಸಂ | ಕಾಮಗಾರಿಯ ಹೆಸರು | ಡಿಪಿಆರ್ ಮೊತ್ತ ರೂ. (ಕೋಟಿಗಳಲ್ಲಿ) | ಷರಾ |
|---|---|---|---|
| 1 | ಜಲಾಭಿಮುಖ ಪ್ರದೇಶ ಅಭಿವೃದ್ಧಿ (Promonade Development) | 32.72 | ಜಿಲ್ಲಾ ಮತ್ತು ರಾಜ್ಯ ಮಟ್ಟದ CRZ ಅನುಮೋದನೆ ದೊರಕಿರುತ್ತದೆ. |
| 2 | ತಣ್ಣೀರ್ಬಾವಿ ಪ್ರದೇಶ ಅಭಿವೃದ್ಧಿ | 72.30 | ಜಿಲ್ಲಾ ಮಟ್ಟದ CRZ ಅನುಮೋದನೆ ದೊರಕಿದ್ದು, ರಾಜ್ಯ ಮಟ್ಟದ CRZ ಸಮಿತಿಯ ಅನುಮೋದನೆ ನಿರೀಕ್ಷಿಸಲಾಗಿದೆ. |
| 3 | ಸುಲ್ತಾನ್ ಭತ್ತೇರಿ ಪ್ರದೇಶ ಅಭಿವೃದ್ಧಿ | | |
| 4 | ಸುಲ್ತಾನ್ ಭತ್ತೇರಿಯಿಂದ ತಣ್ಣಿರು ಬಾವಿ ಪ್ರದೇಶ ಪಾದಚಾರಿ ಸಮುದ್ರ ನದಿ ಸಂಪರ್ಕ ಸೇತುವೆ ನಿರ್ಮಾಣ | | |
| | ಒಟ್ಟು ಮೊತ್ತ | 105.02 | |

- ಅದರಂತೆ, ಮೇಲಿನ ಆರು ಕಾಮಗಾರಿಗಳ ಯೋಜನಾ ವರದಿಗಳಿಗೆ ಬಾಹ್ಯ ಪರಿಣಿತರನ್ನು ಒಳಗೊಂಡ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯ ಶಿಫಾರಸ್ಸಿನೊಂದಿಗೆ ದಿನಾಂಕ:07.03.2022ರ 23ನೇ ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ನಿರ್ದೇಶಕರ ಮಂಡಳಿ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ. ಆನಂತರ ಟೆಂಡರ್ ಪ್ರಕ್ರಿಯೆ ಕೈಗೊಂಡು ದಿನಾಂಕ:07.03.2022ರ 23ನೇ ಹಾಗೂ ದಿನಾಂಕ:29.03.2022 ರಂದು ನಡೆದ 24ನೇ ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ಮಂಡಳಿ ಸಭೆಯಲ್ಲಿ ಟೆಂಡರ್‌ಗಳನ್ನು ಅನುಮೋದಿಸಿ, ಗುತ್ತಿಗೆದಾರರಿಗೆ ದಿನಾಂಕ:05.05.2022 ರಂದು ಕಾರ್ಯಾದೇಶ ನೀಡಲಾಗಿದೆ.
- ಪ್ರಸ್ತುತದಲ್ಲಿ ಮೇಲಿನ 4 ಯೋಜನೆಗಳ ಪೈಕಿ ಜಲಾಭಿಮುಖ ಪ್ರದೇಶ ಅಭಿವೃದ್ಧಿ (Promonade Development) ಯೋಜನಾ ವರದಿಯಲ್ಲಿ ನೇತ್ರಾವತಿ ಸೇತುವೆಯಿಂದ ಬೋಳಾರ ಸೀ ಫೇಸ್‌ವರೆಗಿನ 2.1 ಕಿ.ಮೀ.ಗಳ ಪೈಲೆಟ್ ಸಮಗ್ರ ಕಾಮಗಾರಿಗೆ ರೂ.70 ಕೋಟಿ (ಜಿಎಸ್‌ಟಿ ಒಳಗೊಂಡಂತೆ) ಅಂದಾಜು ಪಟ್ಟಿಗೆ ಮಂಜೂರಾತಿ ನೀಡಲಾಗಿದೆ. ಅದರಂತೆ ಈ ಯೋಜನೆಯನ್ನು 5 ಉಪ ಕಾಮಗಾರಿಗಳಾಗಿ ವಿಂಗಡಿಸಿ, ರೂ. 51.00 ಕೋಟಿಗಳಿಗೆ (ಜಿಎಸ್‌ಟಿ ಹೊರತುಪಡಿಸಿ) ಟೆಂಡರ್ ಕರೆಯಲಾಗಿದ್ದು, ರೂ.49.67 ಕೋಟಿಗಳಿಗೆ (ಜಿಎಸ್‌ಟಿ ಹೊರತುಪಡಿಸಿ) ಕಾರ್ಯದೇಶ ನೀಡಲಾಗಿದೆ.

| | | |
|---|---|---|
| | | ಪ್ರಸ್ತುತ ಕಾಮಗಾರಿಯ ಒಟ್ಟು ಮೊತ್ತವನ್ನು ರೂ.32.72 ಕೋಟಿ ಮೊತ್ತಕ್ಕೆ ಪರಿಷ್ಕರಿಸಲಾಗಿರುತ್ತದೆ. ಜೂನ್-2024 ರವರೆಗೆ ರೂ.2.42 ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿದೆ.<br><br>ಜಲಾಭಿಮುಖ ಯೋಜನೆಯ ಅನುಷ್ಠಾನ ಪೂರ್ವದಲ್ಲಿ ಪಡೆಯಲಾಗಿರುವ ಅನುಮೋದನೆ/ಅನುಮತಿಯ ವಿವರ;<br><br>• ಈ ಯೋಜನೆಗೆ ಅಗತ್ಯವಿರುವ Concept Note ಡಿಪಿಆರ್ ಗಳನ್ನು ಬಾಹ್ಯ ಪರಿಣಿತರನ್ನು ಒಳಗೊಂಡ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯ ಸಭೆಯಲ್ಲಿ ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.<br><br>• ಈ ಯೋಜನೆಯಲ್ಲಿ ಅಳವಡಿಸಿರುವ ಕಾಮಗಾರಿ ಅಂಶಗಳ ಅನುಷ್ಠಾನಕ್ಕೆ ಅಗತ್ಯವಿರುವ ಅನುಮೋದನೆಯನ್ನು ಜಿಲ್ಲಾ ಮಟ್ಟದ ಕಡಲ ತೀರ ನಿರ್ವಹಣಾ ಸಮಿತಿ ಮತ್ತು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದಿಂದ ಪಡೆಯಲಾಗಿದೆ.<br><br>• ಬಂದರು ಇಲಾಖೆಯ ಜಾಗದಲ್ಲಿ ಜಲಾಭಿಮುಖ ಪ್ರದೇಶ ಅಭಿವೃದ್ಧಿ ಯೋಜನೆಯನ್ನು ಪೈಲೆಟ್ ಆಧಾರದ ಮೇಲೆ ಕಾರ್ಯಗತಗೊಳಿಸಲು ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ತಾತ್ವಿಕ ಅನುಮೋದನೆಯನ್ನು ಪಡೆದಿದ್ದು, ಯೋಜನೆಯನ್ನು ಪೂರ್ಣಗೊಳಿಸಿದ ನಂತರ ಬಂದರು ಇಲಾಖೆಗೆ ಜಾಗವನ್ನು ಮರು ಹಸ್ತಾಂತರಿಸುವ ಷರತ್ತಿನ ಆಧಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.<br><br>ಜಲಾಭಿಮುಖ ಯೋಜನೆಯ ಅನುಷ್ಠಾನ ಪೂರ್ವದಲ್ಲಿ ಕೈಗೊಳ್ಳಲಾಗಿರುವ ಸರ್ವೆ ಕಾರ್ಯದ ವಿವರ;<br><br>• ಜಲಾಭಿಮುಖ ಪ್ರದೇಶ ಅಭಿವೃದ್ಧಿ ಕಾಮಗಾರಿಯಲ್ಲಿ Alingment ನ ಒಂದು ಅಂಚು ನೇತ್ರಾವತಿ ನದಿಯಾಗಿದ್ದು, ಇನ್ನೊಂದು ಅಂಚು ಬಂದರು ಇಲಾಖೆಯ ಭೂಮಿಯ ಭಾಗವಾಗಿರುತ್ತದೆ. ಇದನ್ನು ಗುರುತಿಸಲು ಅತ್ಯಂತ ಮುತುವರ್ಜಿ ವಹಿಸಿ ಈ ಕೆಳಗಿನ ದಾಖಲೆಯನ್ನು ಹೊಂದಿಸಿಕೊಂಡು ಎಲ್ಲಾ ಭೂಮಾಲೀಕರ ಸಹಕಾರದೊಂದಿಗೆ ಜಂಟಿ ಸರ್ವೆ ನಡೆಸಿ, ಸ್ಥಳದಲ್ಲಿ ಗಡಿ ಕಲ್ಲುಗಳನ್ನು ಗುರುತಿಸಿ ಬಂದರು ಇಲಾಖೆಯಿಂದ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ಗೆ ಒದಗಿಸಲಾಗಿದೆ.<br><br>• ಜಲಾಭಿಮುಖ ಯೋಜನೆಯ ಭೂ ಪ್ರದೇಶದ ನಿಖರವಾದ ಜಾಗವನ್ನು ಗುರುತಿಸಲು UPOR ಇಲಾಖೆಯ ದಾಖಲೆಗಳು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ Shape File, ಕಂದಾಯ ಇಲಾಖೆ ಹಾಗೂ ಗ್ರಾಮಲೆಕ್ಕಿಗರ ಜೊತೆ ಬಂದರು ಇಲಾಖೆಯವರ ಮಾರ್ಗದರ್ಶನದಲ್ಲಿ ಅತ್ಯಾಧುನಿಕ ಡ್ರೋನ್ ಸರ್ವೆ, Total Station ಉಪಕರಣಗಳೊಂದಿಗೆ ಸ್ಥಳದ Co-ordinate, Auto CAD ನಕ್ಷೆ ತಯಾರಿಸಿ ಎಲ್ಲಾ ದಾಖಲೆಗಳನ್ನು Superimpose ಮಾಡಿ ಮತ್ತೆ ಸ್ಥಳ ಪರಿಶೀಲನೆ ನಡೆಸಿ ದೊರೆತಿರುವ ಆಯಾಮಗಳನ್ನು ಪ್ರಮಾಣೀಕರಿಸಿದ ನಕ್ಷೆಯ ಆಧಾರದ ಮೇಲೆ ಯೋಜನಾ |

ಸಮಲೋಚಕರು ವಿಸ್ತೃತ ಜಲಾಭಿಮುಖ ಪ್ರದೇಶ ಅಭಿವೃದ್ಧಿಗೆ ವಿನ್ಯಾಸ ರಚಿಸಿದ್ದಾರೆ.

- ಇದಲ್ಲದೇ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಪೂರಕವಾಗಿ ಉಪ ಯೋಜನೆಗಳಾದ Wetland Treatment, Culture Hub, Box Park, Open Air Theater ಇತ್ಯಾದಿಗಳನ್ನು ಒಳಗೊಂಡ ಮಾಸ್ಟರ್ ಪ್ಲಾನ್ ಸಿದ್ದಪಡಿಸಿದ್ದು, ಹಂತ ಹಂತವಾಗಿ ಅನುಷ್ಠಾನಗೊಳಿಸಲು ಯೋಜನೆಯನ್ನು ರೂಪಿಸಲಾಗಿದೆ.

ಜಲಾಭಿಮುಖ ಯೋಜನೆಯ ಅನುಷ್ಠಾನ ಪೂರ್ವದಲ್ಲಿ ಕೈಗೊಳ್ಳಲಾಗಿರುವ ಸಮಾಲೋಚನ ಕಾರ್ಯಗಳ ವಿವರ;

- ದಿನಾಂಕ: 20.10.2020 ರಂದು ಆಯುಕ್ತರು, ಮಂಗಳೂರು ನಗರ ಪಾಲಿಕೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ವಾಟರ್ ಫ್ರಂಟ್ ಅಭಿವೃದ್ಧಿ ಯೋಜನೆಗೆ ಸಂಬಂಧಪಟ್ಟ ವಿವಿಧ ಇಲಾಖೆಗಳ ಅಧಿಕಾರಿಗಳು, ಕೆನರಾ ಛೇಂಬರ್ಸ್ ಆಫ್ ಕಾಮರ್ಸ್ ಮಂಗಳೂರು ಹಾಗೂ CREDAI ಮಂಗಳೂರು ರವರಿಗೆ ತಾಂತ್ರಿಕ ಸಮಾಲೋಚಕರು ಈ ಯೋಜನೆಯ ಬಗ್ಗೆ ವಿಸ್ತೃತವಾಗಿ ವಿವರಣೆ ನೀಡಿರುತ್ತಾರೆ.

- ದಿನಾಂಕ: 04.12.2020 ರಂದು ಮಂಗಳಾ ಸಭಾಂಗಣದಲ್ಲಿ ಮಹಾನಗರ ಪಾಲಿಕೆಯ ಮಹಾಪೌರರು ಹಾಗೂ ಆಯುಕ್ತರು ಕೈಗೊಂಡ ಸಭೆಯಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಸದಸ್ಯರಿಗೆ ಸದರಿ ಯೋಜನೆಯ ರೂಪು ರೇಷೆಗಳನ್ನು ವಿವರಿಸಲಾಗಿರುತ್ತದೆ.

- ದಿನಾಂಕ: 31.05.2023 ರಂದು ನಡೆದ ಸಭೆಯಲ್ಲಿ, ಸದರಿ 2.1ಕಿ.ಮೀ ಯೋಜನಾ ಪ್ರದೇಶದ ಪೈಕಿ ಬಂದರು ಇಲಾಖೆಗೆ ಒಳಪಟ್ಟ ಜಾಗದಲ್ಲಿ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿರುವ ಜನರನ್ನು ಆಹ್ವಾನಿಸಿ, ಜಲಾಭಿವೃದ್ಧಿ ಯೋಜನೆಯಿಂದ ಅವರ ದೈನಂದಿನ ವ್ಯವಹಾರಕ್ಕೆ ಯಾವುದೇ ಅಡಚಣೆ ಅಗುವುದಿಲ್ಲ ಹಾಗೂ ಸದರಿ ವ್ಯಕ್ತಿಗಳ ಖಾಸಗಿ ಮಾಲಿಕತ್ವದ ಸ್ಥಳದಿಂದ ಜಲಾಭಿಮುಖ ಪ್ರದೇಶಕ್ಕೆ ಸೂಕ್ತ ಸಂಪರ್ಕ ಮಾರ್ಗವನ್ನು ಕಲ್ಪಿಸಿಕೊಡಲಾಗುತ್ತದೆ ಎಂದು ಸಭೆಯ ನಡವಳಿಯಲ್ಲಿ ತೀರ್ಮಾನಿಸಲಾಗಿದೆ. ಇದಲ್ಲದೇ ಶಿಳ್ಳೆಕ್ಯಾತ ಅಲೆಮಾರಿ ಜನಾಂಗದ 4 ಕುಟುಂಬಕ್ಕೆ ಸೇರಿದ 16 ಜನರು ತೆಪ್ಪದೊಂದಿಗೆ ಮೀನುಗಾರಿಕೆ ನಡಸುತ್ತಿದ್ದು, ಅವರಿಗೂ ಸಹ ಸೂಕ್ತ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗುವುದೆಂದು ಆಯುಕ್ತರು ಮಂಗಳೂರು ಮಹಾನಗರ ಪಾಲಿಕೆ ರವರು ತಿಳಿಸಿರುತ್ತಾರೆ.

- ಬೋಳಾರ ಸೀಫೇಸ್ ಹತ್ತಿರ ಇರುವ ಮೊಗವೀರ ಮಹಿಳಾ ಸಂಘದ ಪಧಾದಿಕಾರಿಗಳೊಂದಿಗೆ, TVS ಫ್ಯಾಕ್ಟರಿ ಹಾಗೂ ಕಾಮನ್‌ವೆಲ್ತ್ ಟೈಲ್ ಫ್ಯಾಕ್ಟರಿ. ಲೋಬೋ ರಿವರ್ ವಿವ್ (ಕಾಸ್ಸಿಯಾ ಟೈಲ್ ಫ್ಯಾಕ್ಟರಿ), ಜೆ.ಎಚ್ ಮೋರ್ಗಾನ್ ಟೈಲ್ ಫ್ಯಾಕ್ಟರಿ, ಎ.ಜೆ ಶೆಟ್ಟಿ, ಕೆನರಾ ಪ್ಲೈವುಡ್, ಮಂಗಳೂರು ಕ್ಲಬ್ ಪಧಾದಿಕಾರಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಹಕಾರಿ ಮೀನು ಮಾರಾಟ ಫೆಡರೇಷನ್ ನಿಯಮಿತ ಪಧಾದಿಕಾರಿಗಳು, ಸಿಟಿ ಬೋಟ್, ಕೆ.ಎನ್ ಬೋಟ್ ಯಾರ್ಡ್, ಮಥಾಯಿಸ್ ಬೋಟ್ ಯಾರ್ಡ್ ಹಾಗೂ ಇತರೆ ಸಂಘ ಸಂಸ್ಥೆಗಳೊಂದಿಗೆ ಲೋಕಸಭಾ ಸಂಸದರು, ಶಾಸಕರು ಮಂಗಳೂರು

| | | |
|---|---|---|
| | | ದಕ್ಷಿಣ ವಿಧಾನಸಭಾ ಕ್ಷೇತ್ರ, ಮಹಾಪೌರರು ಮಂಗಳೂರು ಮಹಾನಗರ ಪಾಲಿಕೆ, ಆಯುಕ್ತರು ಮಂಗಳೂರು ಮಹಾನಗರ ಪಾಲಿಕೆ, ವ್ಯವಸ್ಥಾಪಕ ನಿರ್ದೇಶಕರು ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ರವರು ವಿವಿಧ ಹಂತಗಳಲ್ಲಿ ನಿಯಮಿತವಾಗಿ ಚರ್ಚಿಸಲಾಗುತ್ತಿದ್ದು, ಸದರಿ ಯೋಜನೆಗೆ ಯಾವುದೇ ಖಾಸಗಿ ಜಾಗದ ಅವಶ್ಯಕತೆ ಇಲ್ಲವೆಂದು ಸ್ಪಷ್ಟೀಕರಣ ನೀಡಲಾಗಿದೆ. ಈ ನಿಟ್ಟಿನಲ್ಲಿ ಬಂದರು ಜಾಗದಲ್ಲಿ ಪರವಾನಗಿ ಪಡೆದು ಪ್ರಸ್ತುತ ವ್ಯಾಪಾರ ವಹಿವಾಟು ನಡೆಸುತ್ತಿರುವ 18 ಜನರ ಪೈಕಿ,13 ಮಂದಿ ಜಲಾಭಿಮುಖ ಪ್ರದೇಶ ಅಭಿವೃದ್ಧಿ ಯೋಜನೆಗೆ ಪೂರ್ಣ ಸಹಮತಿಯನ್ನು ಸೂಚಿಸಿರುತ್ತಾರೆ.<br><br>• ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ವತಿಯಿಂದ ಬಂದರು ಇಲಾಖೆಗೆ ಸೇರಿದ (ಸರ್ಕಾರಿ) ಜಾಗದಲ್ಲಿ ಮಾತ್ರ ಜಲಾಭಿಮುಖ ಪ್ರದೇಶ ಅಭಿವೃದ್ಧಿ ಮೋಟಾರು ರಹಿತ ಸಾರಿಗೆ, ಮನರಂಜನೆ ಹಾಗೂ ಸಾರ್ವಜನಿಕ ಉದ್ಯಾನವನ ಯೋಜನೆಯನ್ನು ಅನುಷ್ಠಾನಗೊಳಿಸಿ ಬಂದರು ಇಲಾಖೆಗೆ ಮರು ಹಸ್ತಾಂತರ ಮಾಡಲಾಗುವುದು ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ಜಲಸಾರಿಗೆ ಮಂಡಳಿ ರವರಿಗೆ ಈಗಾಗಲೇ ತಿಳಿಸಲಾಗಿರತ್ತದೆ.<br><br>ಮೇಲೆ ವಿವರಿಸುವಂತೆ ಸ್ಥಳೀಯರು; ಜನಪ್ರತಿನಿಧಿಗಳು, ಸಾರ್ವಜನಿಕರು ಹಾಗೂ ಇತರೆ ಇಲಾಖೆಗಳು ಸೇರಿದಂತೆ ಸಾರ್ವಜನಿಕರ ಸಭೆ, ಪರಿಶೀಲನಾ ಸಭೆ ಹಾಗೂ ಸಮಾಲೋಚನೆಯ ನಂತರ ಯೋಜನೆಯ ಅನುಷ್ಠಾನವನ್ನು ಕೈಗೆತ್ತಿಕೊಳ್ಳಲಾಗಿದೆ. ಆದ್ದರಿಂದ ಸ್ಥಳಿಯರಿಗೆ ತೊಂದರೆಯಾಗದಂತೆ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗದ ರೀತಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನೇತ್ರಾವತಿ ರಿವರ್ ಫ್ರಂಟ್ (ಜಲಾಭಿಮುಖ) ಯೋಜನೆಯನ್ನು ಸರ್ಕಾರದ ಕಾಯ್ದೆ ಹಾಗೂ ನಿಯಮಗಳ ಅನುಸಾರ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ವೈಜ್ಞಾನಿಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. |

ಸಂಖ್ಯೆ: ನಅಇ 111 ಸಿಎಸ್‌ಎಸ್ 2024

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

Smart City

ಮಂಗಳೂರು ಸ್ಮಾರ್ಟ್ ಸಿಟಿ
MANGALURU
SMART CITY

# ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಮಂಗಳೂರು ಮಹಾನಗರ ಪಾಲಿಕೆ ಕಟ್ಟಡ, 2ನೇ ಮಹಡಿ, ಎಮ್.ಜಿ. ರಸ್ತೆ, ಲಾಲ್‌ಬಾಗ್, ಮಂಗಳೂರು - 575 003, ದ.ಕ.

## ಅನುಬಂಧ-1

ಸ್ಮಾರ್ಟ್ ಸಿಟಿ ಅಭಿಯಾನದಡಿ ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ವತಿಯಿಂದ ನೇತ್ರಾವತಿ Water Front ಅಭಿವೃದ್ಧಿಗೆ ಮಹಾಯೋಜನೆ (Master Plan) ತಯಾರಿಸಲಾಗಿದ್ದು, ಇದರಡಿ 6 ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಡಿಪಿಆರ್ ಮೊತ್ತ ರೂ. (ಕೋಟಿಗಳಲ್ಲಿ) | ಕಾರ್ಯಾದೇಶದ ದಿನಾಂಕ | ಯೋಜನಾ ಅವಧಿ | ಪ್ರಸ್ತುತ ಪ್ರಗತಿಯ ವಿವರ |
|---|---|---|---|---|---|
| 1 | ಜಲಾಭಿಮುಖಪ್ರದೇಶ ಅಭಿವೃದ್ಧಿ (Promonade Development) | 32.72 | 05.05.2022 | 31.03.2024 | ಸದ್ರಿ ಕಾಮಗಾರಿಯ ಮುಕ್ತಾಯ ದಿನಾಂಕ:31.03.2023 ಯಾಗಿರುತ್ತದೆ. ಆದರೆ, ಜಿಲ್ಲಾ ನ್ಯಾಯಾಲಯ ಹಾಗೂ ಮಾನ್ಯ ಹಸಿರು ನ್ಯಾಯ ಮಂಡಳಿಯಲ್ಲಿ ತಾತ್ಕಾಲಿಕ ತಡೆಯಾಜ್ಞೆ ಇರುವುದರಿಂದ ಕಾಮಗಾರಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಕಾಲವಧಿ ವಿಸ್ತರಣೆ ಕೋರಿ ಕೆ.ಯು.ಐ.ಡಿ.ಎಫ್.ಸಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| 2 | ತಣ್ಣೀರ್‌ಬಾವಿಪ್ರದೇಶ ಅಭಿವೃದ್ಧಿ | 12.60 | 05.05.2022 | 30.06.2025 | "ತಣ್ಣೀರುಭಾವಿ ಪ್ರದೇಶ ಅಭಿವೃದ್ಧಿ ಯೋಜನೆಯು" Finishing ಕಾಮಗಾರಿಯು ಪ್ರಗತಿಯಲ್ಲಿದೆ. ಸದ್ರಿ ಯೋಜನೆಯ EOT 30-03-2024 ರ ವರೆಗೆ ದೊರಿತ್ತದ್ದು, ಪರಿಷ್ಕೃತ EOT ಯನ್ನು 30-06-2025 ರ ವರೆಗೆ ವಿಸ್ತರಿಸಲು ಪ್ರಸ್ತಾವಿಸಲಾಗಿದೆ. |
| 3 | ಸುಲ್ತಾನ್ಬತ್ತೇರಿ ಪ್ರದೇಶಅಭಿವೃದ್ಧಿ | 9.77 | 05.05.2022 | 30.06.2025 | ಸುಲ್ತಾನ್ ಬತ್ತೇರಿ ಬದಿಯಲ್ಲಿ ವಾಹನ ಸೇತುವೆಯ ಲ್ಯಾಂಡಿಂಗ್ ಈ ಪ್ರದೇಶದಲ್ಲಿದೆ ಬರುತ್ತಿರುವ ಕಾರಣ ಹಾಗು ಆ ಸಮಯದಲ್ಲಿ ಘನ ವಾಹನಗಳ ಸಂಚಾರದಿಂದ ಸದ್ರಿ ಯೋಜನೆಯಿಂದ ಅಭಿವೃದ್ಧಿ ಪಡಿಸಲಾಗಿರುವ ಮೂಲಸೌಕರ್ಯಗಳು ನಾಶಗೊಳ್ಳುವ ಅಪಾಯವಿರುವುದರಿಂದ "ಸುಲ್ತಾನ್ ಬತ್ತೇರಿ ಪ್ರದೇಶ ಅಭಿವೃದ್ಧಿ" ಯೋಜನೆಯನ್ನು ಇನ್ನೂ ಪ್ರಾರಂಭಿಸಲಾಗಿರುವುದಿಲ್ಲ. ಆದುದರಿಂದ ಸದ್ರಿ "ಸುಲ್ತಾನ್ ಬತ್ತೇರಿ ಪ್ರದೇಶ ಅಭಿವೃದ್ಧಿ" ಯೋಜನೆಯ ನಿರ್ಮಾಣವನ್ನು ಸುಲ್ತಾನ್ ಬ್ಯಾಟರಿ ಪ್ರದೇಶದ ಬದಿಯಲ್ಲಿ ವಾಹನ ಸೇತುವೆಯ ಯೋಜನೆಯ ಲ್ಯಾಂಡಿಂಗ್ ಸಮಯದಲ್ಲಿ ಮಾತ್ರ ತೆಗೆದುಕೊಳ್ಳಬಹುದು. ಸದ್ರಿ ಯೋಜನೆಯ EOT 30-03-2024 ರ ವರೆಗೆ ದೊರಿತ್ತದ್ದು, ಪರಿಷ್ಕೃತ EOT ಯನ್ನು 30-06-2025 ರ ವರೆಗೆ ವಿಸ್ತರಿಸಲು ಪ್ರಸ್ತಾವಿಸಲಾಗಿದೆ |



REGD.: MANGALURU SMART CITY LIMITED, MCC Building, 2nd Floor, M.G. Road, Lalbaug, Mangaluru - 575 003, D.K.
Ph: 0824-2986321, Email: smartcitymangaluru@gmail.com, Website: www.mangalurusmartcity.net
CIN: U7499KA2017PLC102010 GSTIN: 29AALCM0527G1ZF

| | | | | | |
|---|---|---|---|---|---|
| 4 | Water Jetty ಉನ್ನತ್ತೀಕರಣ | - | - | - | 10-06-2024 ರಂದು ನಡೆದ 39 ನೇ HPSC ಸಭೆಯ ಅನುಮೋದನೆಯ ಪ್ರಕಾರ ಕೈಬಿಡಲಾಗಿದೆ. |
| 5 | ಸುಲ್ತಾನ್ಬತ್ತೇರಿಯಿಂದ ತಣ್ಣಿರುಬಾವಿ ಪ್ರದೇಶಪಾದಚಾರಿ ಸಮುದ್ರ ನದಿ ಸಂಪರ್ಕ ಸೇತುವೆ ನಿರ್ಮಾಣ | 49.93 | 05.05.2022 | 30.06.2025 | 10-06-2024 ರಂದು ನಡೆದ 39 ನೇ ಎಚ್‌ಪಿಎಸ್‌ಸಿ ಸಭೆಯಲ್ಲಿ ಅನುಮೋದನೆಯಂತೆ "ಸುಲ್ತಾನ್ ಬತ್ತೇರಿಯಿಂದ ತಣ್ಣೀರಭಾವಿಗೆ ಪಾದಚಾರಿ ಸಮುದ್ರ ನದಿ ಸಂಪರ್ಕ ಸೇತುವೆ ನಿರ್ಮಾಣ" ಯೋಜನೆಯ ವ್ಯಾಪ್ತಿಯನ್ನು ಈಗ "ಸುಲ್ತಾನ್ ಬತ್ತೇರಿಯಿಂದ ತಣ್ಣೀರಭಾವಿಗೆ ವಾಹನ ಸೇತುವೆ ನಿರ್ಮಾಣ" ಯೋಜನೆಯಾಗಿ ಬದಲಾಯಿಸಲಾಗಿದೆ. ಸದ್ರಿ ಬದಲಾಗಿರುವ "ಸುಲ್ತಾನ್ ಬತ್ತೇರಿಯಿಂದ ತಣ್ಣೀರಭಾವಿಗೆ ವಾಹನ ಸೇತುವೆ ನಿರ್ಮಾಣ" ಯೋಜನೆಯ CRZ ಅನುಮೋದನೆಗೆ ಅರ್ಜಿಯನ್ನು ಸಲ್ಲಿಸಲಾಗಿದ್ದು, DCZMC ಯಿಂದ ಅನುಮೋದನೆ ಮತ್ತು ಶಿಫಾರಸಿಗಾಗಿ ನಿರೀಕ್ಷಿಸಲಾಗುತ್ತಿದೆ. ಸದ್ರಿ ಯೋಜನೆಯ EOT 30-03-2024 ರ ವರೆಗೆ ದೊರೆತ್ತದ್ದು, ಪರಿಷ್ಕೃತ EOT ಯನ್ನು 30-06-2025 ರ ವರೆಗೆ ವಿಸ್ತರಿಸಲು ಪ್ರಸ್ತಾಪಿಸಲಾಗಿದೆ. |
| 6 | ನಾಯರ್ಕುದುರ್ಬಳಿ ಬಯಲು ರಂಗಮಂದಿರ ಹಾಗೂ ವಾಟರ್ಸ್ಪೋರ್ಟ್ಸ್ ಉದ್ಯಾನವನ ಅಭಿವೃದ್ಧಿ | - | - | - | 10-06-2024 ರಂದು ನಡೆದ 39 ನೇ HPSC ಸಭೆಯಲ್ಲಿ ಅನುಮೋದನೆಯ ಪ್ರಕಾರ ಕೈಬಿಡಲಾಗಿದೆ. |
| | **ಒಟ್ಟುಮೊತ್ತ** | **105.02** | | | |

ವ್ಯವಸ್ಥಾಪಕ ನಿರ್ದೇಶಕರು,
ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್
ಮಂಗಳೂರು